ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 99/2021

(ಫ್ರಾಸಾ-1 ಚಾಸಾ-1)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 08.04.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಆನಂದ್ ಕುಮಾರ್ |
| ತಂದೆಯ ಹೆಸರು | - | ಚಂದ್ರಪ್ಪ |
| ವಯಸ್ಸು | - | 43 ವರ್ಷ, |
| ಉದ್ಯೋಗ | - | ಫ್ಲವರ್ ಡೆಕೋರೆಟರ್ |
| ವಾಸ | - | ಬೂದಿಗೆರೆ ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 5-6 ವರ್ಷಗಳ ಹಿಂದೆ ನಾನು ನಮ್ಮ ಊರಿನ ದುರ್ಗಾದೇವಿ ದೇವಸ್ಥಾನದ ಹತ್ತಿರ ಇದ್ದಾಗ ಮಂಜುನಾಥ್ ಎನ್ನುವವರು ಬೂದಿಗೆರೆ ಕೆರೆ ಕಟ್ಟೆಯ ಬಳಿ ಶ್ರೀನಿವಾಸ ಇವರ ಜಮೀನಿನ ಪಕ್ಕದಲ್ಲಿ ಯಾವುದೋ ಶವ ಬಿದ್ದಿದೆ ಎಂದು ನನಗೆ ಹೇಳಿದಾಗ ನಾನು ಪೊಲೀಸರಿಗೆ ಫೋನ್ ಮಾಡಿ ಹೇಳಿದೆನು. ಪೊಲೀಸರು ಅದೇ ದಿನ ಬೆಳಗ್ಗೆ 10-11 ಗಂಟೆಗೆ ಬಂದು ಖಾಲಿ ಎರಡು ಮೂರು ಹಾಳೆಗಳ ಮೇಲೆ ನನ್ನ ಸಹಿ ತೆಗೆದುಕೊಂಡು ಹೋದರು. ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ. ಸದರಿ ದಾಖಲೆಗಳ ಪೈಕಿ ಒಂದು ದಾಖಲಾತಿಯು ದೂರು ಆಗಿದ್ದು, ಇನ್ನೊಂದು ದಾಖಲಾತಿಯು ಸ್ಥಳ ಪಂಚನಾಮೆ ಆಗಿರುತ್ತದೆ. ದೂರನ್ನು ನಿಶಾನೆ ಪಿ1 ಎಂದು, ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ಸ್ಥಳದ ಪಂಚನಾಮೆಯನ್ನು ನಿಶಾನೆ ಪಿ2 ಎಂದು, ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ2(ಎ) ಎಂದು ಗುರುತಿಸಲಾಯಿತು. ಸಹಿಗಳನ್ನು ಪಡೆಯುವಾಗ ಪೊಲೀಸರು ನನಗೆ ಏನನ್ನೂ

ತೋರಿಸಲಿಲ್ಲ. ಸಹಿ ಹಾಕುವಾಗ ನಿನಗೆ ಏನು ತೊಂದರೆ ಆಗುವುದಿಲ್ಲ ಎಂದು ಹೇಳಿದರು. ಸದರಿ ಶವ ಮನುಷ್ಯನದ್ದು ಎಂದು ಗೊತ್ತಾಯಿತು, ಆದರೆ ಯಾರದ್ದೂ ಎಂದು ಗೊತ್ತಾಗಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ದೂರು ಮತ್ತು ಪಂಚನಾಮೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

2. ವಿಚಾರ ತಿಳಿದ ನಂತರ ನಾನು ಮತ್ತು ಮಂಜುನಾಥ ಸ್ಥಳಕ್ಕೆ ಹೋಗಿ ನೋಡಲಾಗಿ ಸದರಿ ಮೃತದೇಹವು 25 ರಿಂದ 30 ವರ್ಷ ವಯಸ್ಸಿ ನ ಗಂಡಸಿನ ಶವವಾಗಿದ್ದು, ಮೈಮೇಲೆ ರಕ್ತಕಲೆಗಳಾಗಿ ರಕ್ತ ಹೆಪ್ಪುಗಟ್ಟಿತ್ತು ಹಾಗೂ ಯಾವುದೋ ಆಯುಧಗಳಿಂದ ಹೊಡೆದು ಸಾಯಿಸಿರುವುದು ಕಂಡು ಬಂದಿರುತ್ತದೆ ಎಂದರೆ ನಾನು ನೋಡಿರುವುದಿಲ್ಲ. ಈ ವಿಚಾರವಾಗಿ ನಾನು ನಿಶಾನೆ ಪಿ1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ಮರು ದಿನ ಪೊಲೀಸರು ಸ್ಥಳಕ್ಕೆ ಬಂದು ನನ್ನ ಮತ್ತು ಚಾಸಾ 2 ಮತ್ತು 3 ರವರ ಸಮಕ್ಷಮ ನಿಶಾನೆ ಪಿ2 ರಂತೆ ಸ್ಥಳ ಪಂಚನಾಮೆ ಮಾಡಿ ಮಾಸಲು ಬಿಳಿ ಬಣ್ಣದ ಕಪ್ಪು ಹೂವುಗಳಿರುವ ಕಾಟನ್ ಬೆಡ್ ಶೀಟ್ ರಕ್ತಕಲೆಯಾಗಿದ್ದು, ರಕ್ತಕಲೆಯಾಗಿರುವ ನೀಲಿ ಕಪ್ಪು ಮತ್ತು ಮಾಸಲು ಬಣ್ಣದ ಚೌಕಳಿ ಉಲ್ಲನ್ ರಗ್ಗು ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ನಾನು ಸ್ಥಳದಲ್ಲಿ ಹಾಜರು ಇರಲಿಲ್ಲ. ಮೊದಲ ಬಾರಿಗೆ ನಾನು ಮೃತದೇಹವನ್ನು ನೋಡಿ ದೂರನ್ನು ನೀಡಿ ಸ್ಥಳ ಪಂಚನಾಮೆ ಕಾಲಕ್ಕೆ ಹಾಜರಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎನ್.ಆರ್ ವಕೀಲರು, 5 ಮತ್ತು 7 ನೇ ಆರೋಪಿತರ ಪರ ಶ್ರೀಮತಿ ಕೆ.ಎಂ.ಸಿ ವಕೀಲರು, 8 ಮತ್ತು 9 ನೇ ಆರೋಪಿತರ ಪರ ಶ್ರೀ ಜಿ.ಎಸ್.ಎಸ್. ವಕೀಲರು ಹಾಗೂ ಉಳಿದ ಆರೋಪಿತರು ಸಾಕ್ಷಿಗೆ ತಮ್ಮ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

ಸಹಿ/-
(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು